ದೂರವಾಣಿ ಸಂ. : 080 2956 2046

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

"ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪತ್ರ"

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ತಿಪ್ಪಾಪುರ ಗ್ರಾಮದ ಸರ್ವೆ ನಂ. 42 ರಲ್ಲಿ 3ಎ-16ಗು, 43/1 ರಲ್ಲಿ 2ಎ-22ಗು, 43/2 ರಲ್ಲಿ 1ಎ-25ಗು, 44/1 ರಲ್ಲಿ 1ಎ-05ಗು, 44/3 ರಲ್ಲಿ 1ಎ-06ಗು, 45/1 ರಲ್ಲಿ 3ಎ-4.50ಗು, 45/2 ರಲ್ಲಿ 1ಎ-9.50ಗು, 46/1 ರಲ್ಲಿ 3ಎ-00ಗು, 46/2 ರಲ್ಲಿ 1ಎ-20ಗು, 46/3 ರಲ್ಲಿ 1ಎ-20ಗು ಮತ್ತು 47/1 ರಲ್ಲಿ 4ಎ-26.50ಗು ಒಟ್ಟು 24ಎಕರೆ 34.50ಗುಂಟೆ ಪೈಕಿ ಭೌತಿಕವಾಗಿ ಸ್ಥಳದಲ್ಲಿ ಲಭ್ಯವಾಗಿರುವ 24ಎಕರೆ 14.50ಗುಂಟೆ ಅಥವಾ 98590.16 ಚ.ಮೀ. ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:

1) ಶ್ರೀಮತಿ/ಶ್ರೀಯುತರಾದ ಗಂಗಾರಾಮಬಡೇರಿಯಾ ಬಿನ್ ಚಿಮನಲಾಲ ಬಡೇರಿಯಾ, ಗೀತಾ ಬಡೇರಿಯಾ ಕೋಂ ಗಂಗಾರಾಮ ಬಡೇರಿಯಾ, ಗಗನ ಬಡೇರಿಯಾ ಬಿನ್ ಗಂಗಾರಾಮ ಬಡೇರಿಯಾ ಮತ್ತು ವಿಕ್ರಂ ಬಡೇರಿಯಾ ಬಿನ್ ಗಂಗಾರಾಮ ಬಡೇರಿಯಾ ರವರ ಪರವಾಗಿ ನೋಂದಾಯಿತ ಜಿಪಿಎದಾರರಾದ ಶಿರಸಾ ಕನ್ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ರ ಪರವಾಗಿ ಅಧಿಕೃತ ಸಹಿದಾರರಾದ ಶ್ರೀ ಪ್ರದ್ಯಮ್ನಕುಮಾರ್ ಮಿಶ್ರ ರವರು ಸಲ್ಲಿಸಿರುವ ಅರ್ಜಿ ದಿನಾಂಕ: 30/10/2025 ಹಾಗೂ ಮನವಿ ಪತ್ರ ದಿನಾಂಕ: 03/01/2026.
2) ಸರ್ಕಾರದ ಆದೇಶ ಸಂ. ನಅಇ 353 ಬಿಎಂಆರ್ 2022, ಬೆಂಗಳೂರು ದಿನಾಂಕ: 24/03/2023.
3) ಭೂ ಉಪಯೋಗ ಬದಲಾವಣೆ ಆದೇಶ ಸಂಖ್ಯೆ: DPA/TP/CLU/18/2022-23 ದಿನಾಂಕ: 13/06/2023.
4) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರಗಳ ಸಂಖ್ಯೆ: 799590 ದಿನಾಂಕ: 20/11/2025 (ಸ.ನಂ. 42), 799591 ದಿನಾಂಕ: 20/11/2025 (ಸ.ನಂ. 43/1), 799592 ದಿನಾಂಕ: 20/11/2025 (ಸ.ನಂ. 43/2), 802369 ದಿನಾಂಕ: 13/11/2025 (ಸ.ನಂ. 44/1), 802379 ದಿನಾಂಕ: 13/11/2025 (ಸ.ನಂ. 44/3), 799587 ದಿನಾಂಕ: 20/11/2025 (ಸ.ನಂ. 45/1), 799589 ದಿನಾಂಕ: 13/11/2025 (ಸ.ನಂ. 45/2), 799580 ದಿನಾಂಕ: 20/11/2025 (ಸ.ನಂ. 46/1),799583 ದಿನಾಂಕ: 13/11/2025 (ಸ.ನಂ. 46/2), 799593 ದಿನಾಂಕ: 13/11/2025 (ಸ.ನಂ. 46/3) ಮತ್ತು 799574 ದಿನಾಂಕ: 20/11/2025 (ಸ.ನಂ. 47/1).
5) ಮಹಾನಗರ ಯೋಜಕರು ಬಿಎಂಆರ್‌ಡಿಎ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರರವರು ಪೂರ್ವಾನುಮತಿ ನೀಡಿರುವ ದಿನಾಂಕ: 27/03/2026.
6) ದಿನಾಂಕ: 31/03/2026 ರಂದು ನಡೆದ ಪ್ರಾಧಿಕಾರದ 40ನೇ ಸಭೆಯ ವಿಷಯ ಸಂ. 40.35 ರ ನಡಾವಳಿ.
7) ಈ ಪ್ರಾಧಿಕಾರದ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ: 30/04/2026.
8) ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ: 3435 ದಿನಾಂಕ: 27/05/2026 ರಂತೆ ಒಟ್ಟು 73,09,300/- ರೂ. (ಎಪ್ಪತ್ಮೂರು ಲಕ್ಷದ ಒಂಬತ್ತು ಸಾವಿರದ ಮೂರು ನೂರು ರೂಪಾಯಿಗಳು ಮಾತ್ರ) ಶುಲ್ಕಗಳನ್ನು ಪಾವತಿಸಿರುತ್ತಾರೆ.
9) ಅರ್ಜಿದಾರರ ಮನವಿ ಪತ್ರ ದಿನಾಂಕ: 12/06/2026.
10) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು ದಿನಾಂಕ: 10/09/2015 ಮತ್ತು ಡಿಪಿಎಎಲ್ 36 ಶಾಸನ 2021, ಬೆಂಗಳೂರು ದಿನಾಂಕ: 07/10/2021.

* * * * *

.....2

E-mail :dpa.dbpura2018@gmail.com

Website : www.doddaballapur.tpa.gov.in

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ/ಶ್ರೀಯುತರಾದ ಗಂಗಾರಾಮಬಡೇರಿಯಾ ಬಿನ್ ಚಿಮನಲಾಲ ಬಡೇರಿಯಾ, ಗೀತಾ ಬಡೇರಿಯಾ ಕೋಂ ಗಂಗಾರಾಮ ಬಡೇರಿಯಾ, ಗಗನ ಬಡೇರಿಯಾ ಬಿನ್ ಗಂಗಾರಾಮ ಬಡೇರಿಯಾ ಮತ್ತು ವಿಕ್ರಂ ಬಡೇರಿಯಾ ಬಿನ್ ಗಂಗಾರಾಮ ಬಡೇರಿಯಾ ರವರ ಪರವಾಗಿ ನೋಂದಾಯಿತ ಜಿಪಿಎದಾರರಾದ ಶಿರಸಾ ಕನ್ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ರ ಪರವಾಗಿ ಅಧಿಕೃತ ಸಹಿದಾರರಾದ ಶ್ರೀ ಪ್ರದ್ಯಮ್ನಕುಮಾರ್ ಮಿಶ್ರ ರವರ ಉಲ್ಲೇಖ (1) ರ ಅರ್ಜಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ತಿಪ್ಪಾಪುರ ಗ್ರಾಮದ ಸರ್ವೆ ನಂ. 42 ರಲ್ಲಿ 3ಎ-16ಗು, 43/1 ರಲ್ಲಿ 2ಎ-22ಗು, 43/2 ರಲ್ಲಿ 1ಎ-25ಗು, 44/1 ರಲ್ಲಿ 1ಎ-05ಗು, 44/3 ರಲ್ಲಿ 1ಎ-06ಗು, 45/1 ರಲ್ಲಿ 3ಎ-4.50ಗು, 45/2 ರಲ್ಲಿ 1ಎ-9.50ಗು, 46/1 ರಲ್ಲಿ 3ಎ-00ಗು, 46/2 ರಲ್ಲಿ 1ಎ-20ಗು, 46/3 ರಲ್ಲಿ 1ಎ-20ಗು ಮತ್ತು 47/1 ರಲ್ಲಿ 4ಎ-26.50ಗು ಒಟ್ಟು 24ಎಕರೆ 34.50ಗುಂಟೆ ಪೈಕಿ ಭೌತಿಕವಾಗಿ ಸ್ಥಳದಲ್ಲಿ ಲಭ್ಯವಾಗಿರುವ 24ಎಕರೆ 14.50ಗುಂಟೆ ಅಥವಾ 98590.16 ಚ.ಮೀ. ವಿಸ್ತೀರ್ಣ ಪ್ರದೇಶದ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ಕೋರಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 95 ಬಿಎಂಆರ್ 2016 ದಿನಾಂಕ: 30-11-2017 ರನ್ವಯ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅನುಮೋದಿತ ಮಹಾಯೋಜನೆ-2021 ರಲ್ಲಿ 'ಭಾಗಶಃ ವಸತಿ ಮತ್ತು ಭಾಗಶಃ ವ್ಯವಸಾಯ' ವಲಯದ ಭೂ ಉಪಯೋಗದಲ್ಲಿರುತ್ತದೆ. ವ್ಯವಸಾಯ ವಲಯದಲ್ಲಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ತಿಪ್ಪಾಪುರ ಗ್ರಾಮದ ಸರ್ವೆ ನಂ. 43/1 ರ ಪೈಕಿ 00-03ಗು, 45/1 ರ ಪೈಕಿ 3ಎ-00ಗು, 46/1 ರಲ್ಲಿ 3ಎ-00ಗು, 46/2 ರ ಪೈಕಿ 00-31ಗು, 46/3 ರ ಪೈಕಿ 1ಎ-15ಗು, 47/1 ರಲ್ಲಿ 4ಎ-26.50ಗು, 44/1 ರ ಪೈಕಿ 00-09ಗು ಮತ್ತು 44/3 ರ ಪೈಕಿ 00-12ಗು ಒಟ್ಟು 13ಎಕರೆ 16.50ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಉಲ್ಲೇಖ (2) ರಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರಡಿಯಲ್ಲಿ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆಯಾಗಿರುತ್ತದೆ. ಅದರನ್ವಯ ಉಲ್ಲೇಖ (3) ರಂತೆ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದಿಂದ ಭೂ ಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ಆದೇಶ ಪತ್ರವನ್ನು ನೀಡಲಾಗಿರುತ್ತದೆ. ಉಲ್ಲೇಖ (4) ರ ಅಧಿಕೃತ ಜ್ಞಾಪನ ಪತ್ರಗಳಂತೆ ಪ್ರಶ್ನಿತ ಜಮೀನುಗಳಿಗೆ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆಯಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 234 ಬಿಎಂಆರ್ 2023 (ಇ) ದಿನಾಂಕ: 20-11-2023 ರಂತೆ ಅನುಮೋದನೆಯಾದ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನಿಯಮಗಳು 2020 ರಲ್ಲಿನ ನಿಯಮ 18(5) ರನ್ವಯ ಮತ್ತು ದಿನಾಂಕ: 27-12-2023 & 03-02-2024 ರಂದು ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರು ಅಧಿಕೃತ ಜ್ಞಾಪನ ಪತ್ರದಲ್ಲಿ ಸೂಚಿಸಿರುವಂತೆ 1ಎಕರೆ ಮೇಲ್ಪಟ್ಟ ವಿಸ್ತೀರ್ಣದ ಪ್ರಸ್ತಾವನೆಗಳನ್ನು ಪೂರ್ವ ಸಮ್ಮತಿಗಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿದ್ದು, ಅದರಂತೆ ಪ್ರಸ್ತಾಪಿತ 'ವಸತಿ' ವಿನ್ಯಾಸ ನಕ್ಷೆ ಅನುಮೋದನೆಗೆ ಉಲ್ಲೇಖ (5) ರನ್ವಯ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ಪೂರ್ವ ಸಮ್ಮತಿಯನ್ನು ಪಡೆಯಲಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ದಿನಾಂಕ: 10/09/2015 ರನ್ವಯ ಕಾಯ್ದೆಗೆ ತಿದ್ದುಪಡಿಯಾಗಿರುವಂತೆ ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17(2) (ಎ) ರಂತೆ ಸದರಿ ವಸತಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (6) ರ ದಿನಾಂಕ: 31/03/2026 ರಂದು ನಡೆದ ಪ್ರಾಧಿಕಾರದ 40ನೇ ಸಭೆಯ ವಿಷಯ ಸಂ. 40.35 ರ ನಡಾವಳಿಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 363 ಬಿಎಂಆರ್ 202 (ಇ) ದಿನಾಂಕ: 12-02-2024 ರ ರೀತ್ಯ ಪ್ರಶ್ನಿತ ಜಮೀನಿನ ಮೇಲೆ ಯಾವುದೇ ವ್ಯಾಜ್ಯ/ಪ್ರಕರಣ/ತಕರಾರುಗಳು ಬಾಕಿ ಇಲ್ಲದಿರುವ ಬಗ್ಗೆ ಮಾಹಿತಿ ಪಡೆಯಲು ಕ್ರಮವಹಿಸಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ರವರಿಂದ

.....3

ದೂರವಾಣಿ ಸಂ. : 080 2956 2046

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

ದೃಢೀಕೃತ ಸರ್ವೆ ನಕ್ಷೆ ಪಡೆದು, ಅದರಂತೆ ವಸತಿ ವಿನ್ಯಾಸ ನಕ್ಷೆಯನ್ನು ಅವಶ್ಯಕವಿದ್ದಲ್ಲಿ ಅನುಮೋದಿತ ವಲಯ ನಿಯಮಾವಳಿಗಳ ಅನುಸಾರ ಮಾರ್ಪಡಿಸಿಕೊಂಡು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಸಿಎಫ್ಇ ಪತ್ರವನ್ನು ಪಡೆದು ಸಲ್ಲಿಸುವ ಹಾಗೂ ಸರ್ವೆ ನಂ. 43/1 ರಲ್ಲಿನ ಭಾಗಶಃ 1ಎಕರೆ 11ಗುಂಟೆ ಪ್ರದೇಶಕ್ಕೆ ಸೀನಿಯರ್ ಸಿವಿಲ್ ಜಡ್ಜ್, ದೊಡ್ಡಬಳ್ಳಾಪುರ ರವರ ನ್ಯಾಯಾಲಯದಲ್ಲಿ ದಾಖಲಾಗಿರುವ ಒ.ಎಸ್. ನಂ. 189/2021 ರ ಅಂತಿಮ ಆದೇಶ/ತೀರ್ಪನ್ನು ಪಾಲಿಸುವ ಷರತ್ತಿಗೊಳಪಟ್ಟು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ತಿಪ್ಪಾಪುರ ಗ್ರಾಮದ ಸರ್ವೆ ನಂ. 42 ರಲ್ಲಿ 3ಎ-16ಗು, 43/1 ರಲ್ಲಿ 2ಎ-22ಗು, 43/2 ರಲ್ಲಿ 1ಎ-25ಗು, 44/1 ರಲ್ಲಿ 1ಎ-05ಗು, 44/3 ರಲ್ಲಿ 1ಎ-06ಗು, 45/1 ರಲ್ಲಿ 3ಎ-4.50ಗು, 45/2 ರಲ್ಲಿ 1ಎ-9.50ಗು, 46/1 ರಲ್ಲಿ 3ಎ-00ಗು, 46/2 ರಲ್ಲಿ 1ಎ-20ಗು, 46/3 ರಲ್ಲಿ 1ಎ-20ಗು ಮತ್ತು 47/1 ರಲ್ಲಿ 4ಎ-26.50ಗು ಒಟ್ಟು 24ಎಕರೆ 34.50ಗುಂಟೆ ಪೈಕಿ ಭೌತಿಕವಾಗಿ ಸ್ಥಳದಲ್ಲಿ ಲಭ್ಯವಾಗಿರುವ 24ಎಕರೆ 14.50ಗುಂಟೆ ಅಥವಾ 98590.16 ಚ.ಮೀ. ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು "Demarcation & Development" ಉದ್ದೇಶಕ್ಕೆ ಸರ್ಕಾರದಿಂದ ಹಾಗೂ ಬಿಎಂಆರ್ಡಿಎ ಕಛೇರಿಯಿಂದ ಹೊರಡಿಸಿರುವ ಸುತ್ತೋಲೆ/ Guidelines ಗಳನ್ವಯ ಸೂಕ್ತ ಷರತ್ತುಗಳನ್ನು ವಿಧಿಸಿ ಅನುಮೋದಿಸಲು ತೀರ್ಮಾನಿಸಲಾಯಿತು ಹಾಗೂ ಅರ್ಜಿದಾರರು ವಸತಿ ವಿನ್ಯಾಸದಲ್ಲಿನ ಮೊದಲನೇ ಹಂತದ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಇಚ್ಛಿಸಿದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2) (ಸಿ) ರಡಿಯಲ್ಲಿ ಮೊದಲನೇ ಹಂತದ ಶೇ 40 ರಷ್ಟು ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲು ಸಹ ತೀರ್ಮಾನಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ಪ್ರಸ್ತಾಪಿತ ವಸತಿ ವಿನ್ಯಾಸ ನಕ್ಷೆಯ ತಾತ್ಕಾಲಿಕ ಅನುಮೋದನೆಗೆ ಸಂಬಂಧಿಸಿದಂತೆ, ಉಲ್ಲೇಖ (7) ರ ಈ ಕಛೇರಿಯ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ನಿಗಧಿತ ಶುಲ್ಕಗಳನ್ನು ಪಾವತಿಸಲು ಹಾಗೂ ಪ್ರಶ್ನಿತ ಸರ್ವೆ ನಂ. 43/1 ರಲ್ಲಿನ ಭಾಗಶಃ 1ಎಕರೆ 11ಗುಂಟೆ ಪ್ರದೇಶಕ್ಕೆ ಸೀನಿಯರ್ ಸಿವಿಲ್ ಜಡ್ಜ್, ದೊಡ್ಡಬಳ್ಳಾಪುರ ರವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವುದರಿಂದ ಒ.ಎಸ್. ನಂ. 189/2021 ರ ಸಂಬಂಧ ಮಾನ್ಯ ನ್ಯಾಯಾಲಯದ ಅಂತಿಮ ಆದೇಶವನ್ನು ಪಡೆದು ಸಲ್ಲಿಸಿದ ನಂತರ ಕ್ರಮ ಜರುಗಿಸಲಾಗುವುದೆಂದು ಸೂಚಿಸಲಾಗಿರುವ ಹಿನ್ನೆಲೆಯಲ್ಲಿ ಉಲ್ಲೇಖ (8) ರಂತೆ ನಿಗಧಿತ ಶುಲ್ಕಗಳನ್ನು ಪಾವತಿಸಿರುತ್ತಾರೆ ಹಾಗೂ ಉಲ್ಲೇಖ (9) ರ ಮನವಿ ಪತ್ರದೊಂದಿಗೆ ಪ್ರಶ್ನಿತ ಸರ್ವೆ ನಂ. 43/1 ರಲ್ಲಿನ ಭಾಗಶಃ 1ಎಕರೆ 11ಗುಂಟೆ ಪ್ರದೇಶಕ್ಕೆ ಸೀನಿಯರ್ ಸಿವಿಲ್ ಜಡ್ಜ್, ದೊಡ್ಡಬಳ್ಳಾಪುರ ರವರ ನ್ಯಾಯಾಲಯದಲ್ಲಿ ಒ.ಎಸ್. ನಂ. 189/2021 ರನ್ವಯ ದಾಖಲಾಗಿರುವ ಪ್ರಕರಣವು ವಜಾಗೊಂಡಿರುವ ಬಗ್ಗೆ ನ್ಯಾಯಾಲಯವು ಹೊರಡಿಸಿರುವ ಅಂತಿಮ ಆದೇಶದ ಪ್ರತಿಯನ್ನು ಸಲ್ಲಿಸಿರುತ್ತಾರೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 363 ಬಿಎಂಆರ್ 202 (ಇ) ದಿನಾಂಕ: 12.02.2024 ರನ್ವಯ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ಕೋರಿರುವ ಜಮೀನುಗಳ ಕುರಿತು ಯಾವುದೇ ವ್ಯಾಜ್ಯ/ಪ್ರಕರಣ/ ತಕರಾರುಗಳು ಇದ್ದಲ್ಲಿ ಹದಿನೈದು ದಿನಗಳೊಳಗಾಗಿ ಯೋಜನಾ ಪ್ರಾಧಿಕಾರಕ್ಕೆ ಮಾಹಿತಿ ನೀಡಲು, ಒಂದು ವೇಳೆ ನಿಗಧಿತ ಅವಧಿಯಲ್ಲಿ ಮಾಹಿತಿ ನೀಡದಿದ್ದಲ್ಲಿ ಯಾವುದೇ ವ್ಯಾಜ್ಯ/ಪ್ರಕರಣ/ತಕರಾರುಗಳು ಇಲ್ಲವೆಂದು ಭಾವಿಸಿ ಅನುಮೋದನೆ ನೀಡಲು ಕ್ರಮವಹಿಸಲಾಗುವುದೆಂದು ತಿಳಿಸಿ ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು ರವರಿಗೆ ದಿನಾಂಕ: 24/03/2026 ರಂದು ಪತ್ರ ಬರೆಯಲಾಗಿದ್ದು, ಸದರಿಯವರು ಈ ದಿನದವರೆಗೂ ಯಾವುದೇ ಮಾಹಿತಿ ನೀಡಿರುವುದಿಲ್ಲ. ಹಾಗಾಗಿ, ಸುತ್ತೋಲೆಯನ್ವಯ ಪ್ರಶ್ನಿತ ಜಮೀನಿನ ಕುರಿತು ಯಾವುದೇ ವ್ಯಾಜ್ಯ/ ಪ್ರಕರಣ/ ತಕರಾರುಗಳು ಇಲ್ಲವೆಂದು ಭಾವಿಸಿ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಬಹುದಾಗಿರುತ್ತದೆ.

.....4

E-mail :dpa.dbpura2018@gmail.com

Website : www.doddaballapur.tpa.gov.in

ಮೇಲ್ಕಂಡ ಅಂಶಗಳನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 156 ಬಿಎಂಆರ್ 2018 ದಿನಾಂಕ: 29-09-2018 ರನ್ವಯ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿನ ಅಭಿವೃದ್ಧಿಗಳಿಗೆ ಅನುಮತಿ ನೀಡಲು ಅಳವಡಿಸಿಕೊಳ್ಳಲಾಗಿರುವ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ವಲಯ ನಿಯಮಾವಳಿಗಳ ಅನುಸಾರ, ಉಲ್ಲೇಖ (6) ರ ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ಹಾಗೂ ಉಲ್ಲೇಖ (10) ರ ಸರ್ಕಾರದ ಅಧಿಸೂಚನೆಗಳನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ತಿಪ್ಪಾಪುರ ಗ್ರಾಮದ ಸರ್ವೆ ನಂ. 42 ರಲ್ಲಿ 3ಎ-16ಗು, 43/1 ರಲ್ಲಿ 2ಎ-22ಗು, 43/2 ರಲ್ಲಿ 1ಎ-25ಗು, 44/1 ರಲ್ಲಿ 1ಎ-05ಗು, 44/3 ರಲ್ಲಿ 1ಎ-06ಗು, 45/1 ರಲ್ಲಿ 3ಎ-4.50ಗು, 45/2 ರಲ್ಲಿ 1ಎ-9.50ಗು, 46/1 ರಲ್ಲಿ 3ಎ-00ಗು, 46/2 ರಲ್ಲಿ 1ಎ-20ಗು, 46/3 ರಲ್ಲಿ 1ಎ-20ಗು ಮತ್ತು 47/1 ರಲ್ಲಿ 4ಎ-26.50ಗು ಒಟ್ಟು 24ಎಕರೆ 34.50ಗುಂಟೆ ಪೈಕಿ ಭೌತಿಕವಾಗಿ ಸ್ಥಳದಲ್ಲಿ ಲಭ್ಯವಾಗಿರುವ 24ಎಕರೆ 14.50ಗುಂಟೆ ಅಥವಾ 98590.16 ಚ.ಮೀ. ವಿಸ್ತೀರ್ಣದ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರನ್ವಯ ವಸತಿ ವಿನ್ಯಾಸ ನಕ್ಷೆಗೆ 'ತಾತ್ಕಾಲಿಕ ಅನುಮೋದನೆ' ನೀಡಲು ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ ಸಂಖ್ಯೆ: DPA/TP/LAO/30/2025-26 ದಿನಾಂಕ: 17 JUL 2026

ಆದೇಶ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ರ ಕಲಂ 17(2) (ಎ) ರಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ತಿಪ್ಪಾಪುರ ಗ್ರಾಮದ ಸರ್ವೆ ನಂ. 42 ರಲ್ಲಿ 3ಎ-16ಗು, 43/1 ರಲ್ಲಿ 2ಎ-22ಗು, 43/2 ರಲ್ಲಿ 1ಎ-25ಗು, 44/1 ರಲ್ಲಿ 1ಎ-05ಗು, 44/3 ರಲ್ಲಿ 1ಎ-06ಗು, 45/1 ರಲ್ಲಿ 3ಎ-4.50ಗು, 45/2 ರಲ್ಲಿ 1ಎ-9.50ಗು, 46/1 ರಲ್ಲಿ 3ಎ-00ಗು, 46/2 ರಲ್ಲಿ 1ಎ-20ಗು, 46/3 ರಲ್ಲಿ 1ಎ-20ಗು ಮತ್ತು 47/1 ರಲ್ಲಿ 4ಎ-26.50ಗು ಒಟ್ಟು 24ಎಕರೆ 34.50ಗುಂಟೆ ಪೈಕಿ ಭೌತಿಕವಾಗಿ ಸ್ಥಳದಲ್ಲಿ ಲಭ್ಯವಾಗಿರುವ 24ಎಕರೆ 14.50ಗುಂಟೆ ಅಥವಾ 98590.16 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಮಟ್ಟ ಮಾಡುವುದು, ನೆಲಗಟ್ಟಿ ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲುಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿ ದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಗಳನ್ನೊಳಗೊಂಡಂತೆ ನಿವೇಶನಗಳು ರಸ್ತೆ ಪಂಕ್ತೀಕರಣ, ಉದ್ಯಾನವನ ಮತ್ತು ನಾಲಾ ಪ್ರದೇಶ ಮಳೆನೀರು ಸಂಗ್ರಹಣೆ ಘಟಕ (Rain water Harvesting), Sewage Treatment Plant (ಘನತ್ಯಾಜ್ಯ ನೀರು ಸಂಸ್ಕರಣಾ ಘಟಕ), ಸೋಕ್‌ಪಿಟ್ ಮತ್ತು ಯಾವುದೇ ಇತರೆ ಮೂಲ ಸೌಕರ್ಯವನ್ನು ತೋರಿಸಿ ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ಮಾತ್ರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ, ವಸತಿ ವಿನ್ಯಾಸ ನಕ್ಷೆಗೆ "ತಾತ್ಕಾಲಿಕ ಅನುಮೋದನೆ" ನೀಡಲಾಗಿದೆ.

ಷರತ್ತುಗಳು

1) ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ 03 ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಸತಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.

2) ಸಕ್ಷಮ ಪ್ರಾಧಿಕಾರಗಳ Specifications ರನ್ವಯ ಜಮೀನನ್ನು ಮಟ್ಟ ಮಾಡುವುದು, ನೆಲಗಟ್ಟು ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲು ಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಯನ್ನೊಳಗೊಂಡಂತೆ ನಿವೇಶನಗಳು, ರಸ್ತೆ ಪಂಕ್ತೀಕರಣ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ಪ್ರದೇಶ ಮತ್ತು ಯಾವುದೇ ಇತರ ಮೂಲ ಸೌಕರ್ಯವನ್ನು ತೋರಿಸಿ, ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಅನುಸಾರವಾಗಿ ತಾತ್ಕಾಲಿಕ ಬಡಾವಣೆ ನಕ್ಷೆಗೆ ಮಂಜೂರಾತಿಯನ್ನು ನೀಡಲಾಗಿದೆ.

3) ತಾತ್ಕಾಲಿಕ ಅನುಮೋದನೆ ಆಗಿರುವ ವಸತಿ ವಿನ್ಯಾಸ ನಕ್ಷೆಯ ರೀತ್ಯ ಮಾಲೀಕನು ಯಾವುದೇ ಪರಿಹಾರವನ್ನು ಕ್ಲೇಮು ಮಾಡದೆಯೇ ಉಚಿತವಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಸಾರ್ವಜನಿಕ ಉಪಯೋಗದ ರಸ್ತೆಗಳನ್ನು, ಉದ್ಯಾನಗಳನ್ನು ಹಸ್ತಾಂತರಿಸತಕ್ಕದ್ದು. ಹಾಗೂ ಫೆನ್ಸಿಂಗ್ ಅಳವಡಿಸಿ ಸಂರಕ್ಷಿಸತಕ್ಕದ್ದು.

.....5

4) ಸಂಬಂಧಪಟ್ಟ ಪ್ರಾಧಿಕಾರದ/ಮಂಡಳಿ/ಇಲಾಖೆಯ ಮೇಲ್ವಿಚಾರಣೆಯ ಅಡಿಯಲ್ಲಿ, ಮೇಲೆ ಹೇಳಲಾದ ಎಲ್ಲಾ ಮೂಲ ಸೌಕರ್ಯಗಳನ್ನು ಒಳಗೊಂಡ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಕ್ಕಾಗಿ ಸಂಬಂಧಪಟ್ಟ ಪ್ರಾಧಿಕಾರ/ ಮಂಡಳಿ/ ಇಲಾಖೆಯಿಂದ ಕಾರ್ಯಪೂರ್ತಿ ಪ್ರಮಾಣ ಪತ್ರವನ್ನು ಪಡೆದು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ರಸ್ತೆಗಳು, ಉದ್ಯಾನಗಳನ್ನು ಬಿಟ್ಟುಕೊಟ್ಟ ಬಗ್ಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು.

5) ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯ ರೀತ್ಯ ಅನುಮೋದನೆ ನೀಡಿದ 03 ವರ್ಷಗಳೊಳಗಾಗಿ ಸಂಪೂರ್ಣವಾಗಿ ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕಗಳನ್ನು ಅಭಿವೃದ್ಧಿಪಡಿಸತಕ್ಕದ್ದು.

6) ವಸತಿ ವಿನ್ಯಾಸದ ಗಡಿ ನಿರ್ಧಾರ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ವಿನ್ಯಾಸದಲ್ಲಿನ ನಿವೇಶಗಳನ್ನು ಪರಭಾರೆ ಮಾಡುವುದಾಗಲೀ ಮತ್ತು ಖಾತೆ ತೆರೆಯುವುದಾಗಲೀ ಮಾಡತಕ್ಕದ್ದಲ್ಲ. ನಿವೇಶನಗಳಲ್ಲಿ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಅಥವಾ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದಲ್ಲ ಅಥವಾ ನೀಡತಕ್ಕದ್ದಲ್ಲ.

7) ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ-2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

8) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ Water (Prevention and Control of Pollution) Act 1974 ರ ಕಲಂ 25 ರ ರೀತ್ಯ ಸೂಕ್ತ ಪ್ರಮಾಣದ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಲು Consent for Establishment ಪೂರ್ವಾನುಮತಿ ಪಡೆಯದೇ ಪ್ರಶ್ನಿತ ನಿವೇಶನ / ಜಾಗದಲ್ಲಿ ನೆಲ ಅಗಿಯುವಿಕೆ ಒಳಗೊಂಡಂತೆ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಅಥವಾ ವಸತಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದಲ್ಲ ಹಾಗೂ ಅಂತಿಮ ಅನುಮೋದನೆ ಸಮಯದಲ್ಲಿ Consent for Operation ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

9) ಪ್ರಸ್ತಾವಿತ ಬಡಾವಣೆಯಲ್ಲಿನ ನಿವೇಶನದಾರರಿಗೆ ನೀರು ಸರಬರಾಜು, STP/ಸೆಪ್ಟಿಕ್ ಟ್ಯಾಂಕ್ ಮುಂತಾದ ಮೂಲಭೂತ ಸೌಕರ್ಯಗಳನ್ನು ಬಡಾವಣೆಯ ಮಾಲೀಕರು ಒದಗಿಸತಕ್ಕದ್ದು.

10) ಪ್ರಶ್ನಿತ ಜಮೀನಿನಲ್ಲಿ ಸರ್ಕಾರಿ ಖರಾಬು ಜಾಗವನ್ನು ಯಥಾವತ್ತಾಗಿ ಕಾಯ್ದಿರಿಸತಕ್ಕದ್ದು ಹಾಗೂ ಈ ಜಾಗವನ್ನು ಒತ್ತುವರಿ ಮಾಡುವುದು ಅಥವಾ ಇತರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

11) ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಸರ್ಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

12) ಈ ಅನುಮೋದನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 ರಡಿಯಲ್ಲಿ ನೀಡುತ್ತಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸತಕ್ಕದ್ದಲ್ಲ.

13) ಸದರಿ ವಸತಿ ವಿನ್ಯಾಸದಲ್ಲಿನ ನಿವೇಶನಗಳನ್ನು ಉಪವಿಭಜನೆ ಮಾಡಿ ಮಾರಾಟ ಮಾಡತಕ್ಕದ್ದಲ್ಲ, ಒಂದು ವೇಳೆ ಯಾವುದೇ ಬದಲಾವಣೆಯ ಅವಶ್ಯಕತೆ ಇದ್ದಲ್ಲಿ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಯನ್ನು ಮಾಡಬಾರದು.

14) ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು.

.....6

15) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ರಸ್ತೆ, ರಸ್ತೆಬದಿ ಚರಂಡಿ, ಕಲ್‌ವರ್ಟ್‌ಗಳು, ಪಾದಚಾರಿ ಮಾರ್ಗ ಇತ್ಯಾದಿ ಸಿವಿಲ್ ಕಾಮಗಾರಿಗಳನ್ನು ಸಂಬಂಧಿತ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ನಗರ ಸ್ಥಳೀಯ ಸಂಸ್ಥೆಯ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ, ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

16) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಾಮಗಾರಿಗಳನ್ನು ಸಂಬಂಧಿತ ಸ್ಥಳೀಯ ಸಂಸ್ಥೆಯ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

17) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ವಿದ್ಯುದ್ಧಿಕರಣೆ ಕಾಮಗಾರಿಗಳನ್ನು ಸಂಬಂಧಿತ ಬೆಸ್ಕಾಂ ಮಂಡಳಿ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

18) ಪ್ರಸ್ತಾಪಿತ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

19) ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಕೆ ಮಾಡತಕ್ಕದ್ದು.

20) ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಕಡೆ ಗಿಡ/ಮರಗಳನ್ನು ಬೆಳೆಸುವುದು.

21) ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

22) ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

23) ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

24) ತಾತ್ಕಾಲಿಕ ವಸತಿ ವಿನ್ಯಾಸ ಅನುಮೋದನೆ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಸತಿ ವಿನ್ಯಾಸಕ್ಕೆ ನೀಡಿರುವ ತಾತ್ಕಾಲಿಕ ಅನುಮೋದನೆ ತಂತಾನೇ ಸ್ವಯಂಚಾಲಿತವಾಗಿ ರದ್ದಾಗುತ್ತದೆ.

25) ಮೇಲಿನಂತೆ ನೀಡಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

26) ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ/ನಾಲಾ ಮುಂತಾದವುಗಳಿಗೆ ವಿನ್ಯಾಸದ ಮಲೀನ ನೀರನ್ನು ಬಿಡಬಾರದು. ಸದರಿ ವಸತಿ ವಿನ್ಯಾಸ ನಕ್ಷೆಯಲ್ಲಿ ಸೂಚಿಸಲಾಗಿರುವ ನಾಲಾ ಪ್ರದೇಶಗಳಲ್ಲಿ ರಸ್ತೆ ಪರಿಚಲನೆಯನ್ನು ಮುಂದುವರಿಸುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದು ಕಲ್ವರ್ಟ್ ಕಟ್ಟತಕ್ಕದ್ದು, ಹಾಗೂ ನೀರಿನ ಹರಿವಿಗೆ ಯಾವುದೇ ಅಡಚಣೆ ಮಾಡತಕ್ಕದ್ದಲ್ಲ, ಹಾಗೂ ಸೂಕ್ತ ಡ್ರೈನೇಜ್ ನಿರ್ಮಿಸಿ ಸಂರಕ್ಷಿಸತಕ್ಕದ್ದು, ಹಾಗೂ ಯಾವುದೇ ಒತ್ತುವರಿ ಮಾಡತ್ತಕ್ಕದ್ದಲ್ಲ. ಸರ್ಕಾರದ ಅಧಿಸೂಚನೆ ಸಂ. ಯುಡಿಡಿ15ಟಿಟಿಪಿ2015, ದಿನಾಂಕ: 21/04/2020 ರ ರೀತ್ಯ ಜಲಪ್ರದೇಶಗಳ ಬಫರ್ ಜಾಗದಲ್ಲಿ Water pumping stations, Walking tracks, Play fields without any building constructions, cycling tracks & Parks ಗಳನ್ನು ಮಾತ್ರ ಅಭಿವೃದ್ಧಿಪಡಿಸತಕ್ಕದ್ದು.

27) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 209 ಬಿಎಂಆರ್ 2016, ದಿನಾಂಕ: 31.03.2017 ರ ರೀತ್ಯ ಪತ್ರಿಕೆ, ಮಾಧ್ಯಮ, ಜಾಹೀರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಪಡೆದುಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು.

28) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಚಿಸಿರುವ Direction under section 18(1) (b) of Water (Prevention & Control of Pollution) Act, 1974ರ ಕಾಯ್ದೆಯಲ್ಲಿ ರೂಪಿಸಿರುವ ನಿಯಮದಂತೆ ಕ್ರಮ ಕೈಗೊಳ್ಳಲು ಸೂಚಿರುವಂತೆ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

....7

ದೂರವಾಣಿ ಸಂ. : 080 2956 2046

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

i. ರಾಜ ಕಾಲುವೆಯನ್ನು ಮುಚ್ಚದಂತೆ ಕ್ರಮವಹಿಸುವುದು.

ii. ರಾಜಕಾಲುವೆಗಳಿಗೆ ಯಾವುದೇ ಕೊಳಚೆ ನೀರು ಹಾಗೂ ಇನ್ನಿತರೆ ತ್ಯಾಜ್ಯ ವಸ್ತುಗಳು ಸೇರ್ಪಡೆಯಾಗದಂತೆ ಕ್ರಮವಹಿಸುವುದು.

iii. ಕಂದಾಯ ಇಲಾಖೆಯ ದಾಖಲೆಗಳಂತೆ ಇರುವ ರಾಜ ಕಾಲುವೆಗಳ ಅಳತೆಗಳನ್ನು ಅತಿಕ್ರಮ/ ಒತ್ತುವರಿ ಆಗದಂತೆ ಯಥಾವತ್ತಾಗಿ ಕಾಯ್ದಿರಿಸಿಕೊಂಡು ಸರಾಗವಾಗಿ ನೀರು ಹರಿಯಲು ಬೇಕಾದ ಕ್ರಮವಹಿಸುವುದು.

iv. ರಾಜ ಕಾಲುವೆಗಳು Silt ಆಗದಂತೆ ಹಾಗೂ ತೆರೆದ ಸ್ಥಿತಿಯಲ್ಲಿ ಸ್ವಚ್ಛವಾಗಿರುವಂತೆ ಕ್ರಮವಹಿಸುವುದು.

29) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಪ್ರಾಧಿಕಾರವು ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

ಅರ್ಜಿದಾರರು ವಿನ್ಯಾಸದಲ್ಲಿನ ಕಾಮಗಾರಿಗಳನ್ನು ಒಟ್ಟಾರೆಯಾಗಿ ಅಭಿವೃದ್ಧಿಪಡಿಸಿದ ನಂತರ, ಸದರಿ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಪಡೆಯುವ ಪೂರ್ವದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ವಿವಿಧ ಇಲಾಖೆಗಳಿಂದ ಅಂದರೆ ನೀರು ಸರಬರಾಜು, ಒಳಚರಂಡಿ ಅಭಿವೃದ್ಧಿಪಡಿಸಿರುವ ಬಗ್ಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ, ರಸ್ತೆ ಕಾಮಗಾರಿಗಳು, ಮಳೆನೀರು ಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ, ವಿದ್ಯುತ್ ಸರಬರಾಜು ಮಾಡಿರುವ ಬಗ್ಗೆ ಬೆಸ್ಕಾಂನಿಂದ, ಉದ್ಯಾನವನ/ ಬಯಲುಜಾಗ ಅಭಿವೃದ್ಧಿಪಡಿಸಿರುವ ಬಗ್ಗೆ ತೋಟಗಾರಿಕೆ ಇಲಾಖೆಯಿಂದ, ಹಾಗೂ Sewage Treatment Plant (ತ್ಯಾಜ್ಯ ನೀರು ಸಂಸ್ಕರಣಾ ಘಟಕ) ಸ್ಥಾಪಿಸಿರುವ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ಪಡೆದ Consent for operation ಪತ್ರ ಮತ್ತು ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಪ್ರಮಾಣ ಪತ್ರ ಹಾಗೂ ವಿನ್ಯಾಸದಲ್ಲಿ ಮೂಲಭೂತ ಸೌಲಭ್ಯಗಳು ಮತ್ತು ಸಾರ್ವಜನಿಕ ಪ್ರದೇಶಗಳ ನಿರ್ವಹಣೆ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಕಾಮಗಾರಿ ಮುಕ್ತಾಯ ಪತ್ರವನ್ನು ಪಡೆದು ಸಲ್ಲಿಸಿ, ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ಹಾಗೂ ನಿವೇಶನಗಳ ಬಿಡುಗಡೆಗೆ ಮನವಿ ಸಲ್ಲಿಸತಕ್ಕದ್ದು.

ಲಗತ್ತು:-
ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಮಾತ್ರ ನೀಡಲಾಗಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ.

17/7/24

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,
ದೊಡ್ಡಬಳ್ಳಾಪುರ.

17/7

ರವರಿಗೆ,
ಶ್ರೀಮತಿ/ಶ್ರೀಯುತರಾದ ಗಂಗಾರಾಮಬಡೇರಿಯಾ ಬಿನ್ ಚಿಮನಲಾಲ ಬಡೇರಿಯಾ,
ಗೀತಾ ಬಡೇರಿಯಾ ಕೋಂ ಗಂಗಾರಾಮ ಬಡೇರಿಯಾ,
ಗಗನ ಬಡೇರಿಯಾ ಬಿನ್ ಗಂಗಾರಾಮ ಬಡೇರಿಯಾ ಮತ್ತು
ವಿಕ್ರಂ ಬಡೇರಿಯಾ ಬಿನ್ ಗಂಗಾರಾಮ ಬಡೇರಿಯಾ
ರವರ ಪರವಾಗಿ **ನೋಂದಾಯಿತ ಜಿಪಿಎದಾರರಾದ**
ಶಿರಸಾ ಕನ್ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ರ ಪರವಾಗಿ
ಅಧಿಕೃತ ಸಹಿದಾರರಾದ ಶ್ರೀ ಪ್ರದ್ಯುಮ್ನಕುಮಾರ್ ಮಿಶ್ರ,
4ನೇ ಮಹಡಿ, ಸತ್ವ ವಿಂಡ್ಸರ್, ನಂ. 3, ಹಲಸೂರು ರಸ್ತೆ,
ಬೆಂಗಳೂರು – 560042.

f:\bharathi\2025 lao files\provisional approval\30-2025-26 thippapura sirsa constructions .doc